# ಬೆಳೆಯುವ ವಾಕ್ಯ

ವಿಷಯ: ಕನ್ನಡ

ಉದ್ದೇಶ: ಪದ ಸಂಪತ್ತಿನ ಹೆಚ್ಚಳ

ತರಗತಿ: 5–7

ಸಾಮಾನ್ಯ ಸೂಚನೆ : ಆಟಕ್ಕಾಗಿ ಅಗತ್ಯವಿರುವ ಮೊದಲ ವಾಕ್ಯ ಬೆಳೆಸಲು ಸಾಧ್ಯ ಅಸಾಧ್ಯತೆಗಳ ಕುರಿತಾಗಿ ಆಲೋಚಿಸಬೇಕು. ಆರಂಭಿಕ ವಾಕ್ಯ ಚಿಕ್ಕದಾಗಿರಲಿ.

ಅದು ಮಕ್ಕಳು ಸರ್ವೇಸಾಮಾನ್ಯವಾಗಿ ನೋಡಿರುವ, ಅವರ ಅನುಭವಕ್ಕೆದಕ್ಕಿರುವ ವಿಷಯವನ್ನು ತಿಳಿಸಲಿ.

ಆಟ ಆಡುವ ರೀತಿ:

- ಶಿಕ್ಷಕರು ಒಂದು ಸಣ್ಣ ವಾಕ್ಯವನ್ನು ಹೇಳುತ್ತಾ ಕಪ್ಪು ಹಲಗೆಯ ಮೇಲೆ ಬರೆಯುವುದು. ಇದನ್ನು ಹೇಗೆ ಬೆಳೆಸಬಹುದು ಎಂದು ಉದಾಹರಣೆ ಕೊಡುವುದು.
- ನಂತರ ಬೆಳೆಸಲು ಸಾಧ್ಯವಾಗುವ ಇನ್ನೊಂದು ಸಣ್ಣ ವಾಕ್ಯ ನೀಡುವುದು. ಸರದಿಯಲ್ಲಿ ಒಬ್ಬರು ಒಂದು ಪದ ಸೇರಿಸಬಹುದು. ಮಕ್ಕಳು ಬೆಳೆಸಿದ ವಾಕ್ಯಗಳನ್ನು ಹೇಳುತ್ತಾ ಕಪ್ಪು ಹಲಗೆಯ ಮೇಲೆ ಬರೆಯುವುದು.
- ಪರ್ಯಾಯವಾಗಿ ಇದನ್ನು ಗುಂಪುಚಟುವಟಿಕೆಯನ್ನಾಗಿ ಪರಿವರ್ತಿಸಬಹುದು.
- ಒಂದು ವಾಕ್ಯದಿಂದ ಪ್ರಾರಂಭಿಸಿ, ಒಬ್ಬೊಬ್ಬರು ಒಂದೊಂದು ವಾಕ್ಯ ಸೇರಿಸಿ ಕತೆಯನ್ನು ರಚಿಸಬಹುದು.

ಉದಾ:

ಮರದಲ್ಲಿ ಹಕ್ಕಿ ಇದೆ

ಒಂದು ಮರದಲ್ಲಿ ಹಕ್ಕಿ ಇದೆ

ಒಂದು ಮರದಲ್ಲಿ ಹಕ್ಕಿ ಗೂಡು ಇದೆ

ಒಂದು ಮರದಲ್ಲಿ ಹಕ್ಕಿ ಗೂಡು ಕಟ್ಟುತ್ತಾ ಇದೆ

ಒಂದು ಮರದಲ್ಲಿ ಬಿಳಿಹಕ್ಕಿ ಗೂಡು ಕಟ್ಟುತ್ತಾ ಇದೆ

ಒಂದು ಮರದಲ್ಲಿ ಬಿಳಿ ಹಕ್ಕಿ ಮರಿಗಾಗಿ ಗೂಡು ಕಟ್ಟುತ್ತಾ ಇದೆ

- ನಾಚಿಕೆ ಸ್ವಭಾವದ ಮಕ್ಕಳು, ಪದವನ್ನು ಚೀಟಿಯಲ್ಲಿ ಬರೆದುಕೊಟ್ಟರೆ ಅದನ್ನು ಸ್ವೀಕರಿಸಬಹುದು.
- ಮಾತನಾಡಲು ಬಾರದ ಮಕ್ಕಳು, ಸಂಜ್ಞೆಯಲ್ಲಿ ತಾವು ಸೇರಿಸಬೇಕಾದ ಪದವನ್ನು ತೋರಿಸಬಹುದು.
- ಹೆಚ್ಚು ಕಾಲಾವಕಾಶವನ್ನು ಅಗತ್ಯವಿರುವ ಮಕ್ಕಳಿಗೆ, ಆ ಸಮಯ ನೀಡಲು ತಯಾರಾಗಿರಬೇಕು
- ವಾಕ್ಯವನ್ನು ಬೆಳೆಸಲು ಸಹಾಯದ ಅಗತ್ಯವಿದ್ದಾಗ ಸೂಕ್ತ ಸುಳಿವು ನೀಡುವ ಪ್ರಶ್ನೆಯನ್ನು ಕೇಳುವುದು.

ಶೈಕ್ಷಣಿಕ ಮಹತ್ವ :

- ಆಟಗಳು ಮುಕ್ತ ವಾತಾವರಣ ಕಲ್ಪಿಸುತ್ತದೆ. ಇಂತಹ ಸನ್ನಿವೇಶದಲ್ಲಿ ಕಲಿತ ಪದಗಳು ಮನಸ್ಸಿನಲ್ಲಿ ಉಳಿಯುತ್ತದೆ.
- ಮಕ್ಕಳು ಇದರಲ್ಲಿ ಸಕ್ರಿಯವಾಗಿ, ಆಸಕ್ತಿಯಿಂದ ಭಾಗವಹಿಸುತ್ತಾರೆ.
- ವಾಕ್ಯಗಳನ್ನು ಬೆಳೆಸಲು ಇರುವ ಸಾಧ್ಯತೆಗಳ ಕುರಿತಾಗಿ ಸೃಜನಶೀಲತೆಯಿಂದ ಚಿಂತಿಸಲು ಎಡೆ ಮಾಡಿಕೊಢುತ್ತದೆ.

**ಮೌಲ್ಯಮಾಪನ :**

ದರ್ಜಾ ಮಾಪನಿ

| | ಹೌದು | ಇಲ್ಲ |
|---|---|---|
| ಸಕ್ರಿಯ ಆಲಿಸುವಿಕೆ/ ಪಾಲುಗೊಳ್ಳುವಿಕೆ. | | |
| ಸರಿಹೊಂದುವ ಪದ ನೀಡುವರೇ | | |